


## ಮಹಿಳೆಯರಿಗೆ ಉಡುಗೊರೆ

‘ಮೂವರು ಮಾಯಿಯರು’ (ಮಾ. 07) ಮುಖಪುಟ ಲೇಖನ ಅದ್ಭುತವಾಗಿದೆ. ಈ ಮೂವರು ತಾಯಿಯರ ಸಾಧನೆ ಅಚ್ಚರಿ ಮೂಡಿಸಿತು. ಎಚ್‌ಐವಿ ಪೀಡಿತ ಮಕ್ಕಳಿಗೆ ‘ಅಮ್ಮ’ನಾಗಿರುವ ತಬಸ್ಸುಮ್ ಅವರ ಬಗ್ಗೆ ಹೆಮ್ಮೆ ಮೂಡಿತು. ಬದುಕು ಕೊಟ್ಟ ಸವಾಲಿಗೆ ಎದುರಾಗಿ ನಿಂತು ಧೈರ್ಯದಿಂದ ಮುನ್ನುಗ್ಗಿ ಆಂಬುಲೆನ್ಸ್ ಚಾಲಕಿಯಾಗಿ ಸ್ವಾವಲಂಬಿ ಹಾದಿಯಲ್ಲಿ ನಡೆದ ರಾಧಿಕಾ ಅವರ ಛಲ ಮಾದರಿ ಎನಿಸಿತು. ಒಬ್ಬರೇ ನಿಂತು ಮೂರು ಬಾವಿ ಕಟ್ಟಿದ ಗೌರಮ್ಮ ಅವರ ನಿಸ್ವಾರ್ಥ ಸೇವೆ ಕಂಡು ಮನಸ್ಸು ಕರಗಿತು. ಮೂವರು ಮಾಯಿಯರ ಪರಿಚಯ ‘ಮಹಿಳಾ ದಿನ’ಕ್ಕೆ ನಿಜಕ್ಕೂ ‘ಸುಧಾ’ ಕೊಟ್ಟ ಬಹುದೊಡ್ಡ ಉಡುಗೊರೆ.

—ಕಾತ್ಯಾಯಿನಿ, ಬೆಂಗಳೂರು

## ಮನುಕುಲಕ್ಕೆ ಬೇಕು ಇಂಥವರು

‘ಮೂವರು ಮಾಯಿಯರು’ ಲೇಖನದಲ್ಲಿ ‘ಮಹಾಮಾಯಿಯ ಸ್ನೇಹದೀಪ’ ಲೇಖನ ಓದುತ್ತಾ ಕಣ್ಣಲ್ಲಿ ನೀರು ತುಂಬಿಬಂತು. ಎಚ್‌ಐವಿ ಸೋಂಕಿನಿಂದ ಬಳಲುವ ಮಕ್ಕಳನ್ನು ಪ್ರೀತಿ, ತುಂಬು ಅಕ್ಕರೆಯಿಂದ ನೋಡಿಕೊಂಡು ಸಾಕುವ ತಬಸ್ಸುಮ್‌ರಂಥವರು ಮಾನವ ಕುಲಕ್ಕೆ ಒಂದು ಕೊಡುಗೆಯೇ ಸರಿ. ಅವರಿಗೆ ನನ್ನದೊಂದು ಸಲಾಂ. ಮನಕಲಕುವಂತೆ ಅವರ ಕಥೆಯನ್ನು ಬರೆದ ಲೇಖಕಿ ಸಂಧ್ಯಾ ಹೆಗಡೆಯವರಿಗೂ ಧನ್ಯವಾದಗಳು.

—ಮಾಧವ ಉದ್ಯಾವರ, ಮೈಸೂರು

## ಗೌರಮ್ಮನ ಮಾತೃಹೃದಯ

ಈ ಬಾರಿಯ ಮುಖಪುಟ ಲೇಖನ ಬಲು ವಿಶೇಷವೆನಿಸಿತು. ‘ಗಂಗಮ್ಮನ ತಂದ ಗೌರಮ್ಮ’ (ರಾಜೇಂದ್ರ ಹೆಗಡೆ) ಲೇಖನ ಓದಿ ಹೃದಯ ಕರಗಿತು. ಶಿರಸಿಯ ಗೌರಮ್ಮ ಅವರ ಮಾತೃಹೃದಯ ಕಂಡು ಮನಸ್ಸು ತುಂಬಿ ಬಂತು. ಸಮಾಜದ ಒಳಿತಿಗಾಗಿ ಶ್ರಮದಾನ ಮಾಡಿ ಬಾವಿ ತೋಡಿ ಮಾದರಿ ವನಿತೆಯಾಗಿದ್ದಾರೆ. ಇಂಥವರ ಸಂತತಿ ಸಾವಿರವಾಗಲಿ.

—ದಾಕ್ಷಾಯಣಿ

## ‘ಸ್ತ್ರೀರತ್ನ’ಗಳು

ತಬಸ್ಸುಮ್, ರಾಧಿಕಾ ಹಾಗೂ ಗೌರಮ್ಮ– ಹೆಣ್ಣಿನ ಸಾಧನೆಗೆ ಅತ್ಯುತ್ತಮ ನಿದರ್ಶನಗಳು. ಈ ಮೂವರು ಸ್ತ್ರೀರತ್ನಗಳ ಸಾಧನೆ, ಛಲ, ಸಮಾಜಸೇವೆ ಸಮಾಜಕ್ಕೆ ಮಾದರಿ. ಅವರ ದಿಟ್ಟತನ ಎಲ್ಲರೂ ಮೆಚ್ಚುವಂಥದ್ದು. ಕಷ್ಟದಿಂದ ಬಂದು ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಮನಸ್ಸುಗಳೇ ದೊಡ್ಡದು.

—ಸುಜಾತ ಆರ್., ತುಮಕೂರು

## ಸ್ಫೂರ್ತಿದಾಯಕ ಸಂಚಿಕೆ

ಮಾರ್ಚ್ 7ರ ಸಂಚಿಕೆಯ ಪ್ರತಿ ಲೇಖನವೂ ಚೆನ್ನಾಗಿದೆ. ‘ಮಹಿಳಾ ದಿನ’ಕ್ಕೆ ಮೂಡಿಬಂದ ‘ಮೂವರು ಮಾಯಿಯರು’ ವಿಶೇಷ ಲೇಖನದಲ್ಲಿ ಮೂವರು ಮಹಿಳೆಯರ ಕಥೆಗಳು ಸ್ಫೂರ್ತಿದಾಯಕವಾಗಿವೆ. ಕೆ.ಆರ್. ಉಮಾದೇವಿ ಉರಾಳರವರ ಅನುಭವ ಕಥನ ‘ಒಳಗಣ್ಣೋಟದ ಚಿತ್ತಾರ’ ಕೆಲ ಕ್ಷಣ ಬಾಲ್ಯಕ್ಕೆ ಕರೆದೊಯ್ಯಿತು. ಶಾಲೆಯ ದಿನದ ಎಲ್ಲ ಶಿಕ್ಷಕ ಶಿಕ್ಷಕಿಯರು ಮನದಾಳದ ಅಂಗಳದಲ್ಲಿ ಮೂಡಿಬಂದರು.

ಇದರೊಂದಿಗೆ, ಮಧುರಾ ಕರ್ಣಮ್ ಅವರ ‘ಒಳಗುದಿ’ ಕಥೆಯಲ್ಲಿ ಹೆಣ್ಣಿನ ಮಾನಸಿಕ ಒತ್ತಡವನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದು ಹಿಡಿಸಿತು. ‘ಹೆಜ್ಜೆಗುರುತು’ ಮೂಲಕ ಮಹಿಳಾ ವಿಜ್ಞಾನಿಗಳನ್ನು ಪರಿಚಯಿಸಿದ ಕೆ.ಎಸ್. ಸೋಮೇಶ್ವರ ಅವರಿಗೂ ವಂದನೆಗಳು. ಭಾರತದ ಸಾಂಸ್ಕೃತಿಕ ರಾಯಭಾರಿ ಷೆಫ್ ಗ್ಯಾರಿ ಮೆಹಿಗನ್‌ರವರನ್ನು ‘ಸೆಲೆಬ್ರಿಟಿ’ಯಾಗಿಸಿದ್ದು ಖುಷಿನೀಡಿತು. ಒಟ್ಟಾರೆ ಪ್ರತಿ ಪುಟವನ್ನು ಸರಾಗವಾಗಿ ಓದಿದ ನಂತರ 60 ವರ್ಷ ಪೂರೈಸಿದ ‘ಸುಧಾ’ಳಿಗೆ ಧನ್ಯವಾದ ಹೇಳದೇ ಇರಲು ಮನಸ್ಸಾಗಲಿಲ್ಲ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ನನ್ನ ಅನುಭವದ ವಾಚನ

‘ಒಳಗಣ್ಣೋಟದ ಚಿತ್ತಾರ’ (ಮಾ. 07, ಉಮಾದೇವಿ ಉರಾಳ) ‘ಅನುಭವ ಕಥನ’ ಓದಿದಾಗ ನನ್ನದೇ ಅನುಭವವನ್ನು ವಾಚಿಸಿದಂತಾಯ್ತು. ಅದೇ ವೃತ್ತಿಯಲ್ಲಿದ್ದು, ಅದೇ ಅನುಭವವನ್ನು ಹೊಂದಿರುವ ನನಗೆ ಈ ಲೇಖನ ತುಂಬಾ ಹಿಡಿಸಿತು.

—ಛಾಯಾ ಶ್ರೀಧರ್

## ಹೆಣ್ಣುಮಕ್ಕಳ ಮನದ ಕನ್ನಡಿ

‘ಒಳಗುದಿ’ ( ಮಾ. 07, ಮಧುರಾ ಕರ್ಣಮ್) ಕಥೆ ಹೃದಯಸ್ಪರ್ಶಿಯಾಗಿದೆ. ಹೆಣ್ಣಿನ ಮಾನಸಿಕ, ದೈಹಿಕ ತಳಮಳಗಳನ್ನು ಎಳೆಎಳೆಯಾಗಿ ಬಿತ್ತರಿಸಲಾಗಿದೆ. ಕುಸುಮಾಳಂತೆ ನಮ್ಮ ಸಮಾಜದಲ್ಲಿ ಎಷ್ಟೋ ಹೆಣ್ಣುಮಕ್ಕಳಿದ್ದಾರೆ. ಒಂದೇ ಒಂದು ಮಾತಿನಿಂದ ಜೀವನವಿಡೀ ಒದ್ದಾಡಿದ ಕುಸುಮಾ ಕೊನೆಗೆ ನಿರಾಳಳಾಗಿದ್ದು ಕಂಡು ಖುಷಿಯಾಯಿತು.

—ಅನುರಾಧಾ, ಹಾಸನ





## ಉತ್ತಮ ಧಾರಾವಾಹಿ

ಡಿ.ಎನ್. ಶ್ರೀನಾಥ್ ಅವರು ಅನುವಾದಿಸುತ್ತಿರುವ ‘ಪಾಲ್‌ನ ತೀರ್ಥಯಾತ್ರೆ’ ಧಾರಾವಾಹಿ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಬರಹಕ್ಕೆ ಮೋನಪ್ಪ ಅವರ ಕಲೆಯ ಸೌಂದರ್ಯವೂ ಜೊತೆಯಾಗಿದೆ.

—ಕೆ.ವಿ. ಕೃಷ್ಣಮೂರ್ತಿ, ಬೆಂಗಳೂರು

## ಭ್ರಷ್ಟಾಚಾರವೇ ದೊಡ್ಡ ಶಾಪ

‘ಬೆಂಗಳೂರಿಗೆ ಅಂಟಿದ ಸಂಚಾರದಟ್ಟಣೆ ಶಾಪ; ಶಾಶ್ವತ ಪರಿಹಾರೋಪಾಯಗಳ ಚಿಂತನೆ ಅಗತ್ಯ’ (ಫೆ. 28, ಎನ್. ಉದಯಕುಮಾರ್) ‘ನಿಮ್ಮೊಡನೆ’ಯಲ್ಲಿ ಬೆಂಗಳೂರಿನ ಸಂಚಾರ ದಟ್ಟಣೆಗಿರುವ ಬಹುತೇಕ ಕಾರಣಗಳನ್ನು ಚರ್ಚಿಸಿದ್ದರೂ ಇವೆಲ್ಲಕ್ಕೂ ಮೂಲವಾಗಿರುವ ಭ್ರಷ್ಟಾಚಾರದ ಬಗ್ಗೆ ಮಾತನಾಡಿಲ್ಲ. ಎಲ್ಲಿಯವರೆಗೆ ಭ್ರಷ್ಟಾಚಾರದ ಕೈ ಜೋಡಿಸುವಿಕೆ ಇರುವುದೋ ಅಂದಿನವರೆಗೆ ವಿಮೋಚನೆಯಿಲ್ಲ.

—ಶ್ರೀನಿವಾಸನ್ ಎಸ್ಕೆ., ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in